**ದಿಃ 13-01-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನಬೋಧಿಸಲಾಯ್ತು.**

**ಮುಂದುವರೆದ ಪಾಟೀಸವಾಲು ಃಃ ಪ್ರತಿವಾದಿ ಪರ ಶ್ರೀ ಕೆ ಸಿ ಕೆ ವಕೀಲರಿಂದಃ**

ನಾನು ದಾವಾ ಆಸ್ತಿಯನ್ನು ಮಲ್ಲೇಶ್ ರವರಿಂದ ಖರೀದಿ ಮಾಡಿದ ಬಾಬ್ತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನಿಪಿ-1 ರಲ್ಲಿ ನಮೂದು ಇರುವಂತೆ ಕೃಷ್ಣಮೂರ್ತಿ ಶೆಟ್ಟಿ ರವರಿಂದ ಪ್ರೇಮಾರವರು ಶುದ್ಧ ಕ್ರಯಪತ್ರವನ್ನು ಪಡೆದುಕೊಂಡಿರುವ ಬಾಬ್ತು ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಪ್ರೇಮಾರವರು ಯಾರು ಎಂದು ನನಗೆ ಗೊತ್ತಿಲ್ಲ. ಪ್ರೇಮಾರವರಿಂದ ನಾನು ಯಾವುದೇ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪ್ರೇಮಾ, ಮಲ್ಲೇಶ್ ರವರ ಹೆಂಡತಿ ಇರಬಹುದು ಎಂದು ನುಡಿಯುತ್ತಾರೆ.

ದಾವಾ ಬಿ ಶೆಡ್ಯೂಲ್ ಸ್ವತ್ತಿಗೆ ಪ್ರತಿವಾದಿಯು ಮೇ 2015 ರಲ್ಲಿ ತೊಂದರೆಯನ್ನು ನೀಡಿರುತ್ತಾರೆ. ಪ್ರತಿವಾದಿಯು ಓ ಎಸ್ ನಂಬರ್ 344/2015 ರ ಆಸ್ತಿಯನ್ನು ಖರೀದಿ ಮಾಡುವ ಸಂದರ್ಭದಲ್ಲಿ ಯಾವುದೇ ರಸ್ತೆ ಇರಲಿಲ್ಲ ಎಂದರೆ ಸರಿಯಲ್ಲ. ಓ ಎಸ್ ನಂಬರ್ 344/2015 ರಲ್ಲಿ ದಿಃ 25/07/2015 ರಂದು ನಾನು ಪ್ರತಿವಾದಿಯ ಸ್ವಾದೀನಕ್ಕೆ ಮತ್ತು ಅನುಭೋಗಕ್ಕೆ ಆತಂಕವನ್ನು ಉಂಟು ಮಾಡಿರುತ್ತೇನೆ ಹಾಗೂ ಅಕ್ರಮವಾಗಿ ರಸ್ತೆಯನ್ನು ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ

This is a True Copy of the Court Records Online. Authenticated @ districts.ecourtsindia.com/cnr/KACM030023522015/truecopy/order-3.pdf

www.ecourtsindia.com



ಸರಿಯಲ್ಲ. ಪ್ರತಿವಾದಿಯು ಓ ಎಸ್ ನಂಬರ್ 344/2015 ರ ಸ್ವತ್ತನ್ನು ಸರ್ವೆ ಮಾಡಿಸಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-9 ರಲ್ಲಿ ಇರುವ ಆಸ್ತಿಗೆ ಗಡಿ ಗುರುತು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ತಪ್ಪು ಚೆಕ್ಕುಬಂದಿಯನ್ನು ನೀಡಿ ಈ ಸುಳ್ಳು ದಾವೆಯನ್ನು ಲಾಭ ಪಡೆಯುವ ಉದ್ದೇಶದಿಂದ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಎಸ್ ಆರ್ ನಂಬರ್ 3608 ದಿಃ 30/06/1992 ರ ನೊಂದಣಿ ಆದ ಕ್ರಯಪತ್ರವನ್ನು ಹಾಜರುಪಡಿಸಿದರೆ ನನ್ನ ವಿರುದ್ಧ ಆಗುತ್ತದೆ ಎಂಬ ಕಾರಣಕ್ಕೆ ಸದರಿ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಎಸ್ ಆರ್ ನಂಬರ್ 3608 ದಿಃ 30/06/1992 ರ ಕ್ರಯಪತ್ರದ ಶೆಡ್ಯೂಲ್ ಆಸ್ತಿಯ ವಿವರಣೆಗಳು ಹಾಗೂ ನಿಪಿ-1 ರಲ್ಲಿ ನಮೂದಾಗಿರುವ ಶೆಡ್ಯೂಲ್ ವಿವರಣೆಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸ ಇ ಎ ಒ

Sd/-

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾ.ದಂ, ಚಿಕ್ಕಮಗಳೂರು

Date : 14-01-2022

(KAJAL A)
III ADDL.CIVIL JUDGE AND JMFC.CHIKMAGALUR
,CHIKMAGALUR

Visit **ecourts.gov.in** for updates or download mobile app "**eCourts Services**" from Android or iOS

This is a True Copy of the Court Records Online. Authenticated @ districts.ecourtsindia.com/cnr/KACM030023522015/truecopy/order-3.pdf